ಶ್ರೀ ಎಸ್. ಎಚ್. ಕಾಜಲಗಿ.— ಈ ಕೆಲಸವನ್ನು ತೆಗೆದುಕೊಳ್ಳಲಿಕ್ಕೆ ೧೯೮೨ನೇ ಸಾಲಿನ ಆಯ್ ವ್ಯಯದಲ್ಲೇ ಸೇರಿಸಲಾಗಿತ್ತು. ಆದರೆ ಇದಕ್ಕೆ ಆಡಳಿತಾತ್ಮಕ ಮಂಜೂರಾತಿ ಕೊಟ್ಟಿದ್ದಾದು ೧೯೮೩ರಲ್ಲಿ ಎಂದರೆ ಆಡಳಿತಾತ್ಮಕ ಮಂಜೂರಾತಿಯನ್ನು ಕೊಡುವುದಕ್ಕೆ ೫ ವರ್ಷಗಳು ಹಿಡಿಯಿತು. ಆದರೆ ಈ ಕೆಲಸ ಇವತ್ತಿನವರೆಗೂ ಪ್ರಾರಂಭವಾಗಿಲ್ಲ. ಮೊನ್ನೆ ನಾನು ಈ ಪ್ರಶ್ನೆಯನ್ನು ಕಳುಹಿಸಿದ ಮೇಲೆ ಕೇವಲ ೪೨ ಸಾವಿರ ರೂಪಾಯಿಗಳ ಪೈಪಿನ ಖರ್ಚನ್ನು ತೋರಿಸಿದ್ದಾರೆ. ಒಂದು ಕೆಲಸವನ್ನು ಆಯ್ವ್ಯಯದಲ್ಲಿ ಸೇರಿಸಿದ ಮೇಲೆ ಆಡಳಿತಾತ್ಮಕ ಮಂಜೂರಾತಿ ಮತ್ತು ತಾಂತ್ರಿಕ ಮಂಜೂರಾತಿ ದೊರೆಯಬೇಕಾದರೆ ೭-೮ ವರ್ಷಗಳು ಹಿಡಿದರೆ, ಇನ್ನು ಆ ಯೋಜನೆ ಮುಗಿಯುವುದು ಯಾವಾಗ? ಇದೊಂದು ರೀಹ್ಯಾಬಿಲಿಟೇಷನ್ ಗ್ರಾಮ. ಈ ಗ್ರಾಮಕ್ಕೆ ಇವತ್ತಿನವರೆಗೂ ಟ್ಯಾಂಕ್ಹರ್‌ನಿಂದ ನೀರನ್ನು ಕೊಡಲಾಗುತ್ತಿವೆ. ಈ ರೀತಿ ಇನ್ನೆಷ್ಟು ದಿವಸ ನೀರನ್ನು ಕೊಡುವುದಕ್ಕೆ ಸಾಧ್ಯ? ಆದ ಕಾರಣ ಈ ಯೋಜನೆಯನ್ನು ಬೇಗನೆ ಮುಗಿಯುವುದಕ್ಕೆ ಮಾನ್ಯ ಮಂತ್ರಿಗಳು ಪ್ರಯತ್ನ ಮಾಡಬೇಕು.

ಶ್ರೀ ಅಬ್ದುಲ್ ನಜೀರ್ ಸಾಬ್.— ಇದು ೧೯೮೨ರಲ್ಲಿ ಮಂಜೂರಾಗಿದ್ದು ನಿಯಮಾನುಸಾರ ಇದಕ್ಕೆ ಹಣವನ್ನು ಒದಗಿಸಿಲ್ಲ. ೧೯೮೭ರಲ್ಲಿ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ಆಗಿದೆ. ೨ ಲಕ್ಷ ೮೮ ಸಾವಿರ ರೂಪಾಯಿಗಳನ್ನು ನಾವು ಈವರೆಗೆ ಕೊಟ್ಟಿದ್ದೇವೆ. ಅಲ್ಲಿ ನಾವು ಜಲಮೂಲವನ್ನು ಗುರುತಿಸಬೇಕು. ಆ ಭಾಗದಲ್ಲಿ ಏತ ನೀರಾವರಿಯಲ್ಲಿ ಏನು ನೀರು ಸಿಗುತ್ತಿದೆ ಅದನ್ನೇ ಕುಡಿಯುವ ನೀರಿನ ಯೋಜನೆಗೂ ಉಪಯೋಗಿಸಬೇಕೆಂದು ನೀರಾವರಿ ಇಲಾಖೆಗೆ ಪ್ರಾರ್ಥನೆಯನ್ನು ಸಲ್ಲಿಸಲಾಯಿತು. ಅವರೂ ಈ ಬಗ್ಗೆ ಒಪ್ಪಿದ್ದಾರೆ. ಇದರಿಂದಾಗಿ ನಿಧಾನ ಸ್ವಲ್ಪ ಆಗಿದೆ. ೧೯೮೯ರ ಅಂತ್ಯ ದೊಳಗೆ ಈ ಕಾರ್ಯವನ್ನು ನಾನು ಮುಗಿಸಿಕೊಡುತ್ತೇವೆ.

ಕೃಷಿಕರಿಗೆ ನಿವೇಶನ ನಿಗಧಿ

೮೭೦. ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೬-೮೭ನೇ ಸಾಲಿನಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಎಷ್ಟು ನಿವೇಶನ ಗಳನ್ನು ಹಂಚಲಾಗಿದೆ?

ಆ) ಯಾವ್ಯಾವ ವರ್ಗಕ್ಕೆ ಹಂಚಲಾಗಿದೆ?

ಇ) ನಿವೇಶನಗಳನ್ನು ಹಂಚುವಲ್ಲಿ ರಾಜ್ಯದಲ್ಲಿನ ಕೃಷಿಕರಿಗೆ ಇಂತಿಷ್ಟು ನಿವೇಶನಗಳನ್ನು ನಿಗಧಿ ಪಡಿಸುವ ಯೋಜನೆ ಇದೆಯೇ?

ಶ್ರೀ ಎಂ. ಪಿ. ಪ್ರಕಾಶ್ (ಬೆಂಗಳೂರು ಅಭಿವೃದ್ಧಿ ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವರು).—

ಅ) ವಿವರಗಳು ಈ ಕೆಳಕಂಡಂತಿವೆ :—

೧. ಮೇ ೮೭ರ ಪ್ರಕಟಣೆ — ೧೯೧೫ ನಿವೇಶನಗಳು
೨. ಡಿಸೆಂಬರ್ ೮೭ರ ಪ್ರಕಟಣೆ — ೫೩೪೬ ನಿವೇಶನಗಳು
೩. ಜನವರಿ ೮೭ರ ಪ್ರಕಟಣೆ — ೪೮೧೩ ನಿವೇಶಗಳು
೪. ಏಪ್ರಿಲ್ ೮೭ರ ಪ್ರಕಟಣೆ — ೧೯೪೨ ನಿವೇಶನಗಳು
೫. ಜುಲೈ ೮೭ರ ಪ್ರಕಟಣೆ — ೩೦೦೦ ನಿವೇಶನಗಳು

ಆ) ವಿವರಗಳು ಈ ಕೆಳಕಂಡಂತಿವೆ :—

೧. ಹಿಂದುಳಿದ ವರ್ಗಗಳು
೨. ಪರಿಶಿಷ್ಟ ಜಾತಿ

೩. ಪರಿಶಿಷ್ಟ ವರ್ಗ
೪. ಮಾಜಿ ಸೈನಿಕರು, ಸೈನಿಕರು
೫. ರಾಜ್ಯ ಸರ್ಕಾರಿ ನೌಕರರು
೬. ಕೇಂದ್ರ ಸರ್ಕಾರಿ ನೌಕರರು
೭. ಅಂಗವಿಕಲರು
೮. ಸಾರ್ವಜನಿಕರು

೩) ಇಲ್ಲ.

ಪ್ರಶ್ನೆಗಳ ಪಟ್ಟಿಯಲ್ಲಿ ಈ ಪ್ರಶ್ನೆಗೆ ಸಂಬಂಧವಾಗಿ ಮಂತ್ರಿಗಳ ಪದನಾಮ ''ವಾರ್ತಾ, ಪ್ರವಾಸೋದ್ಯಮ, ಸಂಸ್ಕೃತಿ ಹಾಗೂ ಬೆಂಗಳೂರು ಅಭಿವೃದ್ಧಿ ಮಂತ್ರಿಗಳು'' ಎನ್ನುವ ಬದಲಾಗಿ, ''ನಗರಾಭಿವೃದ್ಧಿ ಮಂತ್ರಿಗಳು'' ಎಂದು ಆಚ್ಚಾಗಿದೆ, ಅದನ್ನು ತಿದ್ದಿಕೊಳ್ಳಬೇಕು.

ಶ್ರೀ ಬಿ. ಆರ್. ನೀಲಕಂಠಪ್ಪ.—ಮಾನ್ಯ ಅಧ್ಯಕ್ಷರೇ, ಸಾಮಾನ್ಯವಾಗಿ ಈ ರಾಜ್ಯದಲ್ಲಿ ಇದು ಒಂದು ತೊಂದರೆ ಎಂದು ಹೇಳಬೇಕಾಗುತ್ತದೆ. ಹಳ್ಳಿಗರಿಗೆ, ಕೃಷಿಕರಿಗೆ ನಿವೇಶನ ಇಲ್ಲ ಎಂದು ಹೇಳಿದ್ದಾರೆ. ಜಪಾನಿಯರು, ಅರಬ್‌ನವರು ಕೇರಾಫ್ ಆಡ್ರೆಸ್ ಕೊಟ್ಟು ಇಲ್ಲಿ ನಿವೇಶನ ಪಡೆದು ಕೊಂಡಿದ್ದಾರೆ. ಮತದಾರರ ಪಟ್ಟಿಯಲ್ಲಿ ಇವರುಗಳ ಹೆಸರು ಇರುವುದಿಲ್ಲ. ನೂರಕ್ಕೆ ತೊಂಬತ್ತು ಭಾಗ. ರಾಜ್ಯದ ಹೊರಗಿನವರಿಗೇ ಸೈಟುಗಳು ಸಿಗುವುದಕ್ಕೆ ಅವಕಾಶವಾಗಿದೆ. ಆದುದರಿಂದ, ತಾವು ಏನಾದರೂ ನಿರ್ಣಯ ಮಾಡಿ ೫ ವರ್ಷಗಳ ಕಾಲ ಬೆಂಗಳೂರಿನಲ್ಲೇ ಇರುವವರ ಪಟ್ಟಿ ಮಾಡಿ ನಿವೇಶನ ಕೊಡುತ್ತೀರಾ? ಕೃಷಿಕರಿಗೆ ಹಾಗೂ ಕೃಷಿ ಕಾರ್ಮಿಕರಿಗೆ ನಿವೇಶನ ಕೊಡುವುದಿಲ್ಲ ಎಂದು ಹೇಳಿದ್ದೀರಿ. ಇವರಿಗೆ ಕೊಡದೇ ಇರುವುದಕ್ಕೆ ಕಾರಣ ಏನು?

ಶ್ರೀ ಎಂ. ಪಿ. ಪ್ರಕಾಶ್.—ಕರ್ನಾಟಕ ರಾಜ್ಯದಲ್ಲಿ ಸತತವಾಗಿ ೧೦ ವರ್ಷಗಳವರೆಗೆ ವಾಸ ಆಗಿರಬೇಕು ಎನ್ನುವ ಪ್ರಮಾಣ ಪತ್ರ ತೆಗೆದುಕೊಂಡಿರುವವರೆಲ್ಲರೂ ಅರ್ಜಿಯನ್ನು ಹಾಕುವ ಅರ್ಹತೆ ಯನ್ನು ಪಡೆದುಕೊಂಡಿರುತ್ತಾರೆ, ಆದರೆ ಬೆಂಗಳೂರು ನಗರದಲ್ಲಿ ಕೃಷಿ ಕಾರ್ಮಿಕರಿಗೆ ಹಾಗೂ ಕೃಷಿಕರಿಗೆ ನಿವೇಶನ ಕೊಡಬೇಕೆಂದು ಹೇಳುವುದು ಸಾಧುವಾದುದಲ್ಲ. ಇವತ್ತು ಬೆಂಗಳೂರಿನಲ್ಲಿ ಇರುವವರಿಗೇ ನಿವೇಶನವನ್ನು ಕೊಡುವುದಕ್ಕೆ ಆಗುತ್ತಾ ಇಲ್ಲ. ಕೃಷಿ ಕಾರ್ಮಿಕರು, ಕೃಷಿಕರು ಏನಿದ್ದಾರೆ ಅವರು ವಾಸ ಮಾಡತಕ್ಕ ಪ್ರದೇಶದಲ್ಲೇ ಅವರಿಗೆ ನಿವೇಶನ ಕೊಡತಕ್ಕ ಯೋಜನೆಗಳು ಇವೆ. ಸರ್ಕಾರ ಅದನ್ನು ಮಾಡುತ್ತಾ ಬಂದಿದೆ.

ಶ್ರೀ ಬಿ. ಆರ್. ನೀಲಕಂಠಪ್ಪ.—೧೦ವರ್ಷಗಳ ಪ್ರಮಾಣ ಪತ್ರ ಕೊಡುವವರಿಗೆ ಕೊಡುತ್ತೇವೆಂದು ಹೇಳುತ್ತೀರಿ. ನೂರಕ್ಕೆ ತೊಂಭತ್ತು ಭಾಗದ ಜನರು ಬಿ.ಡಿ.ಎ.ಗೆ ಕೇರಾಫ್ ಆಡ್ರೆಸ್ ಕೊಟ್ಟು ಸುಳ್ಳು ಪ್ರಮಾಣಪತ್ರ ಕೊಟ್ಟಿರುತ್ತಾರೆ. ಅವರು ಬಾಂಬೆಯಲ್ಲಿ ವಾಸ ಮಾಡುತ್ತಾ ಇರುತ್ತಾರೆ ನಿಮ್ಮದೋ, ನಮ್ಮದೋ ಕೇರಾಫ್ ಆಡ್ರೆಸ್ ಕೊಟ್ಟು ಪ್ರಮಾಣಪತ್ರ ಕೊಡುತ್ತಾರೆ. ಇಂತಹ ನಿವೇಶನಗಳನ್ನಾದರೂ ವಶಪಡಿಸಿಕೊಂಡು ಈ ಜನರಿಗೆ ಕೊಡುತ್ತೀರಾ?

ಶ್ರೀ ಎಂ. ಪಿ. ಪ್ರಕಾಶ್.—ಅಧ್ಯಕ್ಷರೆ, ಈ ರೀತಿಯಾಗಿ ಬೇರೆ ವಿಳಾಸ ಕೊಟ್ಟು ಲಾಭ ಮಾಡಿ ಕೊಳ್ಳುವ ಜನರೂ ಇರಬಹುದು. ನನಗೆ ಗೊತ್ತಿರುವ ಹಾಗೆ ಎಲ್ಲಾ ವಿವರಗಳು ಪರಿಶೀಲನೆಯಾಗಿವೆ. ಅನೇಕರಿಗೆ ಅರ್ಹತೆ ಮೇಲೆ, ಜೇಷ್ಠತಾ ಪಟ್ಟಿ ಮೂಲಕ ಲೆಕ್ಕಾಚಾರ ಮಾಡಿ, ಗಣಕ ಯಂತ್ರದ ಮೂಲಕ ವಿವರ ಪಡೆದು ಸೈಟುಗಳನ್ನು ಹಂಚಲಾಗುತ್ತಿದೆ. ಕೆಲವು ಬಾರಿ ಸುಳ್ಳು ಪ್ರಮಾಣಪತ್ರ ವನ್ನು ಕೊಟ್ಟು ನಿವೇಶನವನ್ನು ಪಡೆದುಕೊಂಡ ಕೆಲವರ ಮೇಲೂ ನಾವು ಕಾನೂನು ಕ್ರಮಗಳನ್ನು ತೆಗೆದುಕೊಂಡಿರತಕ್ಕ ನಿದರ್ಶನಗಳು ಇವೆ. ಅಂತಹ ವಿವರ ನಿಮ್ಮಲ್ಲಿ ಏನಾದರೂ ಇದ್ದ ಪಕ್ಷದಲ್ಲಿ, ಅದನ್ನು ಕೊಟ್ಟರೆ ಆ ಜನರು ಮೇಲೂ ಖಂಡಿತಾ ಕ್ರಮ ತೆಗೆದುಕೊಳ್ಳುತ್ತೇವೆ. ಈಗಾಗಲೇ ಖಾಲೀ ನಿವೇಶನ ಇಟ್ಟುಕೊಂಡಿರುವಂತಹ ೩ ಸಾವಿರ ಜನರಿಗೆ ನೋಟೀಸ್ ಕೊಟ್ಟು ಆ ಜಾಗವನ್ನು ಏಕೆ ವಾಪಸ್ ತೆಗೆದುಕೊಳ್ಳಬಾರದು ಎನ್ನುವ ಕ್ರಮವನ್ನೂ ಕೂಡಾ ನಾವು ಕೈಗೊಂಡಿದ್ದೇವೆ.

ಶ್ರೀ ರಮೇಶ್ ಕುಮಾರ್.—ನೀವು ನಮ್ಮನ್ನು ನೋಡುವುದೇ ಇಲ್ಲ, ನಮಗೆ ಪ್ರಶ್ನೆ ಕೇಳಲಿಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು.—ನೀವು ನೋಡುವುದಿಲ್ಲ ಎಂದರೆ ಹೇಗೆ ?

ಶ್ರೀ ಸಿ. ಬೈರೇಗೌಡ.—ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು.—ಅವಕಾಶ ಕೊಡುವುದಿಲ್ಲ ತಾವು ಕೂಳಿತುಕೊಳ್ಳಿ. ಮಾನ್ಯ ನೀಲಕಂಠಪ್ಪನವರೇ ತಾವು ಕುಳಿತುಕೊಳ್ಳಿ.

ಶ್ರೀ ರಮೇಶ್ ಕುಮಾರ್. ಬೆಂಗಳೂರು ನಗರದ ಪರಿಸ್ಥಿತಿಯನ್ನು ಅರ್ಥಮಾಡಿ ಕೊಳ್ಳದಿದ್ದರೆ ಹೇಗೆ ಕೆ ನಮಗೆ ರಕ್ಷಣೆ ಕೊಡುವವರು ಯಾರು ?

ಶ್ರೀ ಸಿ. ಬೈರೇಗೌಡ.—ನಾವು ಇಲ್ಲಿ ಏತಕ್ಕೆ ಬರಬೇಕು ? ರುಜು ಮಾಡಿ ಆಚೆ ಹೋಗ ಬಹುದಲ್ಲ. ಸಣ್ಣ ಉಪ ಪ್ರಶ್ನೆ ಕೇಳಲಿಕ್ಕೆ ಆದರೂ ತಾವು ಅವಕಾಶ ಕೊಡಬೇಕು.

ಅಧ್ಯಕ್ಷರು.—ತಾವು ಸ್ವಲ್ಪ ಕೂಳಿತುಕೊಳ್ಳಿ.

ಶ್ರೀ ಸಿ. ಬೈರೇಗೌಡ.—ನಾನು ಜವಾಬ್ದಾರಿಯುತವಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಿಗೆ ಯಾರು ಯಾರಿಗೆ ಸೈಟುಗಳನ್ನು ಕೊಟ್ಟಿದ್ದೀರಿ ಎನ್ನುವ ಬಗ್ಗೆ ಪತ್ರ ಬರೆದರೆ ಅವರಿಂದ ಆದಕ್ಕೆ ಉತ್ತರವಿಲ್ಲ.

ಅಧ್ಯಕ್ಷರು.—ನೀವು ಪ್ರಶ್ನೆಯನ್ನು ಹಾಕಿ. ನೀವು ಪ್ರಶ್ನೆಯನ್ನು ಹಾಕುವುದೇ ಇಲ್ಲ. ದಿವಸಕ್ಕೆ ಒಂದೊಂದು ಪ್ರಶ್ನೆಯನ್ನು ಹಾಕಿ.

ಶ್ರೀ ಸಿ. ಬೈರೇಗೌಡ.—ಉತ್ತರ ಕೊಡುವುದಕ್ಕೆ ಯೋಗ್ಯತೆಯಿಲ್ಲದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಛೇರ್ಮನ್‌ರವರು ಅಲ್ಲಿದ್ದರೆ ನಾವೇನು ಮಾಡಬೇಕು ? ನಾವು ಏನಾಗಬೇಕು ? ಪತ್ರ ಬರೆದರೆ ಅವರು ಉತ್ತರ ಕೊಡುವುದಿಲ್ಲ. ಇಲ್ಲಿ ನೀವು ಪ್ರಶ್ನೆ ಕೇಳುವುದಕ್ಕೆ ಅವಕಾಶ ಕೊಡುವುದಿಲ್ಲ.

ಅಧ್ಯಕ್ಷರು.—ಈಗ ಅವಕಾಶ ಕೊಡುವುದಿಲ್ಲ, ನಿಯಮದ ಚೌಕಟ್ಟಿನೊಳಗಡೆ ಅವಕಾಶ ಕೊಡುತ್ತೇನೆ ತಾವು ಕುಳಿತುಕೊಳ್ಳಿ.

ಜಿಲ್ಲಾ ಪರಿಷತ್‌ಗಳ ಅಧ್ಯಕ್ಷ ಉಪಾಧ್ಯಕ್ಷರು ಹಚ್ಚಿನ ಪ್ರಯಾಣ ಭತ್ಯೆ ಪಡೆದಿರುವುದು.

೧೨೨೧. ಶ್ರೀ ಬಾಬುರೆಡ್ಡಿ ತುಂಗಳ್ (ಬೀಳಗಿ).—ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್‌ರಾಜ್ ಹಾಗೂ ಪಕ್ಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಜಿಲ್ಲಾ ಪರಿಷತ್ ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳು ಪ್ರಯಾಣ ಭತ್ಯೆ ಪಡೆಯುವುದಕ್ಕೆ ಸರಕಾರವೇನಾದರೂ ನಿರ್ದಿಷ್ಟ ಸೂಚನೆ ನೀಡಿದೆಯೇ ?

ಆ) ಹಲವಾರು ಜನ ಜಿಲ್ಲಾ ಪರಿಷತ್ ಅಧ್ಯಕ್ಷ ಉಪಾಧ್ಯಕ್ಷರುಗಳು ಅಧಿಕ ಪ್ರಯಾಣ ಭತ್ಯೆ ಪಡೆದುದರ ಕುರಿತು ಆಡಿಟ್ ಆಕ್ಷೇಪಣೆಗಳೇನಾದರೂ ಬಂದಿವೆಯೇ ?

ಇ) ವಿಜಾಪುರ ಜಿಲ್ಲಾ ಪರಿಷತ್ ಅಧ್ಯಕ್ಷರ ನಿವಾಸ ಮತ್ತು ಕಚೇರಿಗಳ ಒಳ ಅಲಂಕಾರಕ್ಕಾಗಿ ಜಿಲ್ಲಾ ಪರಿಷತ್ ವೆಚ್ಚ ಮಾಡಿದ ರಕಮು ಎಷ್ಟು ?

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು.—

ಅ) ಇಲ್ಲ.

ಆ) ಇಲ್ಲ.

ಇ) ಮನೆ ಬಾಡಿಗೆ ರೂ. ೦.೧೧೯ ಲಕ್ಷಗಳು ಮತ್ತು ರೂ. ೦.೨೩೧ ಲಕ್ಷಗಳು ಪೀಠೋಪಕರಣಗಳಿಗೆ ಖರ್ಚಾಗಿರುತ್ತದೆ.